ಶ್ರೀ ಕೆ.ಹೆಚ್. ಹನುಮೇಗೌಡ:- ಸ್ವಾಮಿ ತಮ್ಮ ಉತ್ತರದಲ್ಲಿ ೨೧ ಕೊಠಡಿಗಳ ಅವಶ್ಯಕತೆ ಇದೆ ಎಂದು ತಾವು ತಿಳಿಸಿದ್ದೀರಿ. ಇನ್ನು ಏಗಡು ವರ್ಷದಲ್ಲಿ ಆ ಕೊಠಡಿಗಳನ್ನು ಪೂರ್ತಾ ಮಾಡಿಕೊಟ್ಟು ಆ ಬಡವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿಕೊಡುತ್ತೀರಾ?

ಡಾ. ಹೆಗ್ಗಪ್ಪ ಡಿ. ಲಮಾಣಿ:- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಮುಂದಿನ ವರ್ಷದ ಅವಧಿಯಲ್ಲಿ ಅವರಿಗೆ ಈ ಕೊಠಡಿಗಳನ್ನು ನಾವು ನಿರ್ಮಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಅಧ್ಯಕ್ಷರು:- ಪಿ.ಜಿ.ಆರ್. ಸಿಂಧ್ಯಾರವರೇ ತಮ್ಮ ಪ್ರ.ಸಂಖ್ಯೆ:ಳಖಳಕ್ಕೆ ಒಂದು ವಾರ ಕಾಲ ಅವಕಾಶ ಇದೆ ಒಂದು ವಾರ ಆದ ನಂತರ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸರ್ಕಾರದ ಉದ್ದೇಶ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಇದು ಬಹಳ ಮಹತ್ವವಾಗಿರತಕ್ಕಂಥ ಪ್ರಶ್ನೆ. ಇದನ್ನು ಏಕೆ ಮುಚ್ಚಿಡಲಿಕ್ಕೆ ಈ ಸರ್ಕಾರ ಪ್ರಯತ್ನ ಮಾಡುತ್ತಿದೆ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:- ಇದನ್ನು ಇನ್ನು ಒಂದು ವಾರ ಆದಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನನ್ನ ಪ್ರ.ಸಂಖ್ಯೆ:ರ್ಗಂಕ್ಕೆ ಮುಖ್ಯ ಮಂತ್ರಿಗಳೋ ಫಾರೆಸ್ಟ್ ಮಂತ್ರಿಗಳೋ ಯಾರು ಉತ್ತರ ಹೇಳುತ್ತೀರಿ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ವೀರಪ್ಪನನ್ನು ಹಿಡಿಯಬಾರದೆಂಬ ಉದ್ದೇಶ ಇದೆಯೋ, ಇಲ್ಲವೋ? ಸನ್ಮಾನ್ಯ ಅಧ್ಯಕ್ಷರೇ ಇದು ಬಹಳ ಮಹತ್ವವಾದ ಪ್ರಶ್ನೆ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ:- ಯಡಿಯೂರಪ್ಪನವರೂ ಮತ್ತೆ ಕೆಲವರು ಡೆಲಿಗೇಷನ್ ಬಂದಿದ್ದಾರೆ ಅವರ ಜೊತೆ ಡಿಸ್ಕಷನ್ ಮಾಡುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನನಗೆ ಉತ್ತರ ಬೇಕು, ವೀರಪ್ಪನನ್ನು ಹಿಡಿಯುತ್ತೀರೋ ಇಲ್ಲವೋ ವೀರಪ್ಪ ಎಲ್ಲಿದ್ದಾನೆ? .....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಸರ್ಕಾರದ ಕಾರ್ಯಕ್ರಮ ಏನು ಐ.ಎ.ಎಸ್, ಐ.ಪಿ.ಎಸ್. ಆಫೀಸರ್‌ಗಳು ಹೋಗಬೇಕೆಂದು ನೀವು ಮಾಡುತ್ತಿದ್ದೀರಾ? ನೀವು ವೀರಪ್ಪನ್‌ನನ್ನು ಹಿಡಿಯುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:- ಈ ಪ್ರಶ್ನೆಯನ್ನು ನಂತರ ತೆಗೆದುಕೊಳ್ಳುತ್ತೇನೆ.

ವಿಷಯ:- ಕಲಘಟಗಿ ತಾಲ್ಲೂಕು ದೇವಿಕೊಪ್ಪದಲ್ಲಿ ಪ್ರೌಢಶಾಲೆಯನ್ನು ಕರಿಮ ಮಹಾವಿದ್ಯಾಲಯವನ್ನಾಗಿ ಪರಿವರ್ತಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬:- (೨೮೯)
ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕಲಘಟಗಿ ತಾಲ್ಲೂಕು ದೇವಿ ಕೊಪ್ಪದಲ್ಲಿ ಸರ್ಕಾರಿ ಪ್ರೌಢಶಾಲೆ ಇದ್ದು ಅದನ್ನು ಜೂನಿಯರ್ ಕಾಲೇಜನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಗಮನದಲ್ಲಿಯೇ?

ಆ) ಹಾಗಿದ್ದಲ್ಲಿ ೧೯೯೩-೯೪ನೇ ಸಾಲಿನಲ್ಲಿ ಮೇಲ್ಕಂಡ ಪ್ರೌಢಶಾಲೆಯನ್ನು ಜೂನಿಯರ್ ಕಾಲೇಜನ್ನಾಗಿ ಪರಿವರ್ತಿಸಲಾಗುವುದೇ?

ಡಾ. ಹೆಗ್ಗಪ್ಪ ಡಿ. ಲಮಾಣಿ
(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಇದೆ.
ಪರಿಶೀಲಿಸಲಾಗುತ್ತಿದೆ.

ಶ್ರೀ ಪಿ.ಸಿ. ಸಿದ್ದನಗೌಡರ್:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ದೇವಿಕೊಪ್ಪದಲ್ಲಿ ಹೈಸ್ಕೂಲನ್ನು ಜೂನಿಯರ್ ಕಾಲೇಜು ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ, ಯಾವಾಗ ಜೂನಿಯರ್ ಕಾಲೇಜು ಮಾಡುತ್ತೀರಿ ಎಂದು ಮಾನ್ಯ ಸಚಿವರು ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಡಾ. ಹೆಗ್ಗಪ್ಪ ಡಿ. ಲಮಾಣಿ:- ಸನ್ಮಾನ್ಯ ಅಧ್ಯಕ್ಷರೇ ಕಲಘಟಗಿ ತಾಲ್ಲೂಕು ದೇವಿಕೊಪ್ಪದಲ್ಲಿ ಜೂನಿಯರ್ ಕಾಲೇಜು ಮಾಡಬೇಕಾದ ಅವಶ್ಯಕತೆ ಇದೆ. ಈ ಬಗ್ಗೆ ಕೆಲವು ರೆಗ್ಯುಲಾರೀಟೀಸ್ ಜಾಯಿಂಟ್ ಡೈರೆಕ್ಟರ್ ಕಡೆಯಿಂದ ರಿಪೋರ್ಟ್ ತರಿಸಿಕೊಳ್ಳಬೇಕಾಗುತ್ತದೆ, ನಂತರ ಅಲ್ಲಿ ಕಾಲೇಜು ಬೇಕೋ ಬೇಡವೋ ಎನ್ನುವ ಬಗ್ಗೆ ಒಂದು ನಿರ್ಣಯವನ್ನು ತಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಇದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ ಹೊರತು ಅಲ್ಲಿ ಮಾಡಬಾರದೆಂದು ಅಲ್ಲ.

ಶ್ರೀ ಪಿ.ಸಿ. ಸಿದ್ದನಗೌಡರ್:- ತಾವು ಹೇಳಿದ ಹಾಗೆ ಅಧಿಕಾರಿಗಳು ವರದಿಯನ್ನು ಕಳುಹಿಸಿದರೆ ತಾವು ಈ ಕೆಲಸವನ್ನು ಮಾಡಿಕೊಡುತ್ತೀರಿ ತಾನೆ?

ಡಾ. ಹೆಗ್ಗಪ್ಪ ಡಿ. ಲಮಾಣಿ:- ಹೌದು, ಅದನ್ನು ನಾವು ಪರಿಶೀಲಿಸಿ ನೋಡುತ್ತೇವೆ. ಇಲಾಖೆಯಿಂದ ಅದು ಬಂದರೆ ಕಳುಹಿಸಿಕೊಡುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ:- ಅಧಿಕಾರಿಗಳು ಕಳುಹಿಸಿಕೊಡುವವರೆಗೂ ಸರ್ಕಾರ ಸುಮ್ಮನೆ ಕೂಡಬಾರದು. ಅದಷ್ಟು ಬೇಗ ವರದಿ ತರಿಸಿಕೊಂಡು, ಮಂಜೂರಾತಿ ಮಾಡಿಕೊಡಬೇಕೆಂದು ಎನಂತಿಸಿಕೊಳ್ಳುತೇನೆ.

ಡಾ. ಹೆಗ್ಗಪ್ಪ ಡಿ. ಲಮಾಣಿ:- ಆಯಿತು.

ವಿಷಯ:- ೧೯೮೩ರಿಂದ ಮಂಜೂರಾದ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೮:- (೨೯೨)
ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ. ೧೯೮೩ನೇ ಇಸವಿಯಿಂದೀಚೆಗೆ ಅನುದಾನ ಸಹಿತ ಮಂಜೂರು ಮಾಡಲಾದ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?